ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1995.

# *ಜ್ಞಾನ ಸರೋವರದ ಉದ್ಘಾಟನೆಯ ಶುಭಮುಹೂರ್ತದಂದು ಅವ್ಯಕ್ತ ಬಾಪ್‌ದಾದರವರ ಮಹಾವಾಕ್ಯಗಳು.(ಬೆಳಗ್ಗೆ 11:00)*

(ज्ञान सरोवर उद्‌घाटन के शुभ मुहूर्त पर अव्यक्त बापदादा के मधुर महावाक्य प्रात: 11.00 बजे)

ಇಂದಿನ ಸ್ನೇಹ ಸಂಪನ್ನ ದಿನದಂದು ಸ್ನೇಹದ ಸಾಗರರಾದ ಬಾಪ್‌ದಾದಾರವರು ತನ್ನ ಅತಿ ಸ್ನೇಹಿ. ಸೇವೆಯಲ್ಲಿ ಸಮಾವೇಶವಾಗಿರುವಂತಹ ಲವಲೀನ ಮಕ್ಕಳನ್ನು ಮಿಲನ ಮಾಡಲು ಬಂದಿದ್ದಾರೆ. ಎಲ್ಲರ ಸ್ನೇಹದ ಗೀತೆಯನ್ನು ಬಾಪ್‌ದಾದಾರವರು ಕೇಳಿಸಿಕೊಳ್ಳುತ್ತಿದ್ದಾರೆ. ಹಾಗೂ ಕೇಳಿಸಿಕೊಳ್ಳುತ್ತಿರುತ್ತಾರೆ. ಪ್ರತಿಯೊಂದು ಮಗುವಿನ ಸ್ನೇಹವನ್ನು ನೋಡಿ ಬಾಪ್‌ದಾದಾರವರು ವಾಹ್! ನನ್ನ ಸ್ನೇಹಿ ಮಕ್ಕಳೇ ವಾಹ್! ಎಂಬ ಗೀತೆಯನ್ನು ಹಾಡುತ್ತಿದ್ದಾರೆ. ಮಕ್ಕಳು ಸಹ ಇಂದಿನ ಸಮರ್ಥ ದಿವಸವನ್ನು ಸೇವೆಯಲ್ಲಿ ಸಾಕಾರ ಮಾಡಿದ್ದಾರೆ ಹಾಗೂ ಮಾಡುತ್ತಿರುತ್ತಾರೆ ಬ್ರಹ್ಮಾ ತಂದೆಯೂ ಸಹ ಮಕ್ಕಳ ಗುಣ ಗಾಯನವನ್ನು ಮಾಡುತ್ತಿದ್ದಾರೆ ಸಾಕಾರ ರೂಪದಿಂದ ಅವ್ಯಕ್ತ ರೂಪದಲ್ಲಿ ಹಾಗೂ ಸಮೀಪ ಜೊತೆಯ ವಿಶೇಷ ಅನುಭವವನ್ನು ಮಾಡಿಸುತ್ತಿದ್ದಾರೆ. ಮಕ್ಕಳಿಗೆ ಎಂದಾದರೂ ತಂದೆಯ ಜೊತೆ ಇಲ್ಲವೆಂದು ಅನುಭವವಾಗುತ್ತದೆಯೇ? ಆಗುತ್ತದೆಯೇ? ಜೊತೆಯಲ್ಲಿ ಜನ್ಮವನ್ನು ತೆಗೆದುಕೊಂಡಿದ್ದೇವೆ, ಸೇವೆಯಲ್ಲಿಯೂ ಜೊತೆಗಾರರಾಗಿದ್ದೇವೆ ಹಾಗೂ ಮುಂದೆ ಹೋಗುತ್ತಾ ಸಹ ಜೊತೆಯಾಗಿರುತ್ತೇವೆ ಬ್ರಹ್ಮಾ ತಂದೆಗೂ ಸಹ ಒಬ್ಬರೇ ಇದ್ದರೆ ಒಳ್ಳೆಯದೆನಿಸುವುದಿಲ್ಲ. ನಿಮಗೆ ಒಂಟಿತನ ಎನಿಸುತ್ತದೆಯೇ? ಜೊತೆ ಇದ್ದೇವೆ, ಜೊತೆಯಲ್ಲಿ ಇರುತ್ತೇವೆ ಜೊತೆ-ಜೊತೆಯಲ್ಲಿಯೇ ನಡೆಯುವೆವು. ಜೊತೆಯಲ್ಲಿಯೇ ರಾಜ್ಯವನ್ನು ಮಾಡುತ್ತೇವೆ. ಶಿವ ಬಾಬಾರವರಿಗೆ ಆರಾಮವನ್ನು ಕೊಡುತ್ತೀರಿ ಹಾಗೂ ನಿಮ್ಮ ಜೊತೆ ಬ್ರಹ್ಮಾತಂದೆಯು ಸಹ ರಾಜ್ಯ ಮಾಡುತ್ತಾರೆ ನಿಮ್ಮ ರಾಜ್ಯ ನೆನಪಿದೆಯೇ? ಇಂದು ಸೇವಾಧಾರಿಯಾಗಿದ್ದೀರಿ ಹಾಗೂ ನಾಳೆ ರಾಜ್ಯಾಧಿಕಾರಿಯಾಗುತ್ತೀರಿ ನಿಮ್ಮ ರಾಜ್ಯ ಎದುರುಗಡೆ ಕಾಣಿಸುತ್ತಿದೆಯೇ? ನಿಮ್ಮ ರಾಜ್ಯದ ಆ ಸ್ವರ್ಗದ ಸ್ಥಾನ, ಸ್ವರ್ಗದ ದಿವ್ಯ ಶರೀರ ರೂಪಿ ವಸ್ತ್ರ ಎಲ್ಲರ ಎದುರುಗಡೆ ಸ್ಪಷ್ಟವಾಗಿ ಕಾಣಿಸುತ್ತಿದೆಯೇ? ಈಗ ಧಾರಣೆ ಮಾಡಿದೆವೆಂದರೆ ಮಾಡಿದೆವು. ಈ ರೀತಿ ಅನುಭವವಾಗುತ್ತದೆಯೇ? ನಿಮ್ಮ ಭವಿಷ್ಯ ಸ್ಪಷ್ಟವಾಗಿದೆಯಲ್ಲವೇ, ಇಂದು ವರ್ತಮಾನವಾಗಿದೆ ಹಾಗೂ ನಾಳೆ ಭವಿಷ್ಯ ವರ್ತಮಾನ ಆಗಿಬಿಡುತ್ತದೆ. ನಿಶ್ಚಯ ಇದೆಯಲ್ಲವೇ ಪಕ್ಕಾ ನಿಶ್ಚಯವಿದೆಯಲ್ಲವೇ?

ಎಲ್ಲಾ ಹಳಬರು ಪಕ್ಕಾ ಇರುವಂತಹವರು ಬಂದಿದ್ದೀರಲ್ಲವೇ ಬಾಪ್‌ದಾದಾರವರಿಗೂ ಸಹ, ವಿಶೇಷ ಬ್ರಹ್ಮಾ ತಂದೆಗೂ ಸಹ ಖುಷಿ ಇದೆ- ಸ್ಥಾಪನೆಯಲ್ಲಿ ಮೊದಲನೇಯದಾಗಿ ಆದಿಯ ಜೊತೆಗಾರ ರತ್ನಗಳು ಎದುರುಗಡೆ ಕುಳಿತಿದ್ದಾರೆ ಹಾಗೂ ಎರಡನೆಯದಾಗಿ ಸ್ಥಾಪನೆಯ ವೃದ್ಧಿಯ ಶ್ರೇಷ್ಠ ರತ್ನಗಳು. ಅಂದಮೇಲೆ ಈ ಸಂಘಟನೆಯಲ್ಲಿ

ಬ್ರಹ್ಮಾತಂದೆ ಎರಡು ಪ್ರಕಾರದ ರತ್ನಗಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಹಾಗೂ ಮಕ್ಕಳು ಸಹ ಎಷ್ಟು ಉತ್ಸಾಹ ಉಲ್ಲಾಸದಿಂದ, ಶರೀರದ ಸಾಲ್ವೇಶನ್‌ನ ಚಿಂತೆಯೂ ಸಹ ಮಾಡದೆ ತಂಪು ತಂಪಾದ ವಾತಾವರಣದಲ್ಲಿ ಬಂದು ತಲುಪಿದ್ದೀರಿ. ಈ ತಂಪಾದ ಹವಾಮಾನವು ನೀವು ಮಕ್ಕಳಿಗೆ ಸಲಾಂ ಹೊಡೆಯಲು ಬಂದಿದೆ. ಹಾಗೆ ನೋಡಿದರೆ ನೀವು ರಾಜ ಸಿಂಹಾಸನದ ಮೇಲೆ ಕುಳಿತಾಗ ಹಿಂದೆಯಿಂದ ಸೇವಕರು ಗಾಳಿಯನ್ನು ಬೀಸುತ್ತಿರುತ್ತಾರೆ. ಅದರಿಂದ ತಂಪು ತಂಪಾದ ಗಾಳಿಯ ಅನುಭವವಾಗುತ್ತದೆ ಎಂದ ಮೇಲೆ ಈ ತಂಪಾದ ಹವಾಮಾನವು ಸಹ ನಿಮಗೆ ಗಾಳಿ ಬೀಸುತ್ತಿದೆ. ಏಕೆಂದರೆ ನೀವು ಎಲ್ಲರೂ ಸಹ ಶ್ರೇಷ್ಠಾತಿ ಶ್ರೇಷ್ಠ ವಿಶೇಷ ಅತ್ಮರಾಗಿದ್ದೀರಿ. ನಶೆ ಇದೆಯಲ್ಲವೇ? ಇಂದು ಬ್ರಹ್ಮಾತಂದೆ ವಿಶೇಷವಾಗಿ ತನ್ನ ಜನ್ಮದ ಜೊತೆಗಾರರು ಹಾಗೂ ಸೇವೆಯ ಜೊತೆಗಾರರು (ಸೇವೆಯ ನಿಮಿತ್ತ ಮೊದಲನೆಯ ರತ್ನಗಳು ಹಾಗೂ ಜನ್ಮದ ಮೊದಲಿನ ಸಮಯದ ರತ್ನಗಳು) ಇಬ್ಬರನ್ನು ನೋಡಿ ನೋಡಿ ಹರ್ಷಿತರಾಗುತ್ತಿದ್ದಾರೆ.

ಒಳ್ಳೆಯದು, ಈ ಹಾಲ್‌ನ್ನು ಸಹ ರಾಜ್ಯ ದರ್ಬಾರ್ ನಂತೆಯೇ ಮಾಡಿದ್ದೀರಿ.( ಜ್ಞಾನ ಸರೋವರದ ಆಡಿಟೋರಿಯಂ ಹಾಲ್) ರಾಜ್ಯ ದರ್ಬಾರನ್ನು ಸೇರುತ್ತದೆ ಎಂದರೆ ಗ್ಯಾಲರಿಯಲ್ಲೂ ಹೋಗಿ ಕುಳಿತುಕೊಳ್ಳುತ್ತಾರೆ, ಗ್ಯಾಲರಿಯಲ್ಲಿ ಕುಳಿತಿರುವವರು ಸಹ ಚೆನ್ನಾಗಿ ಕಾಣಿಸುತ್ತಿರುವಿರಿ. ( ಹಾಲ್ ನಲ್ಲಿ ಎಲ್ಲಾ ಅಣ್ಣಂದಿರು ಕುಳಿತಿದ್ದಾರೆ. ಮಾತೆಯರೆಲ್ಲರೂ ಹೊರಗೆ ಕುಳಿತಿದ್ದಾರೆ) ಒಳ್ಳೆಯದು. ಇಂದಂತೂ ಮಾತೆಯರ ತ್ಯಾಗದ ಭಾಗ್ಯ ಅವರಿಗೆ ಈಗಲೇ ಸಿಕ್ಕಿಬಿಡುತ್ತದೆ. ಒಳ್ಳೆಯ ರೀತಿಯಲ್ಲಿ ತಪಸ್ಸನ್ನು ಮಾಡುತ್ತಲೇ ಇದ್ದೀರಿ. ತಪಸ್ಸಿನ ಫಲ ಸಿಗುತ್ತದೆ. ತಂಪು ತಂಪಾದ ಗಾಳಿಯು ಬರುತ್ತಿದೆ ಹಾಗೂ ಬಿಸಿಲು ಸಹ ಬರುತ್ತಿದೆ. ಒಳ್ಳೆಯದು.

ಜ್ಞಾನ ಸರೋವರ ಎಂದು ಹೇಳುತ್ತೀರಾ ಅಥವಾ ಸ್ನೇಹದ ಸರೋವರ ಎಂದು ಹೇಳುತ್ತೀರಾ? ಜ್ಞಾನ ಸರೋವರದಲ್ಲಿ ಸ್ನೇಹದ ಸರೋವರ ಚೆನ್ನಾಗಿದೆ. ಈ ಜ್ಞಾನ ಸರೋವರ ಸೇವೆಯ ವಿಶೇಷ ಲೈಟ್ ಹೌಸ್ ಹಾಗೂ ಮೈಟ್ ಹೌಸ್ (TWO IN ONE) ಆಗಿದೆ. ಈ ಧರಣಿಯಿಂದ ಅನೇಕ ಆತ್ಮರ ಭಾಗ್ಯದ ನಕ್ಷತ್ರ ಹೊಳೆಯುವುದು ಅನೇಕ ಆತ್ಮರು ತನ್ನ ಅಗಲಿ ಹೊದ ತಂದೆಯ ಜೊತೆಗೆ ಮಿಲನ ಮಾಡುತ್ತಾರೆ ಅನೇಕ ಆತ್ಮರ ದುಃಖ ದೂರ ಮಾಡುವಂತಹ ಧರೆಯಾಗಿದೆ. ಸರೋವರದಲ್ಲಿ ಬರುತ್ತಿದ್ದಂತೆಯೇ ಸುಖದ ಅಲೆಯಲ್ಲಿ ತೇಲುವಂತಹ ಅನುಭವ ಮಾಡುತ್ತಿರುತ್ತಾರೆ. ಇದರ ಮೂಲಕ ಮೂರು ತರಹದ ಜನರು ಮೂರು ಪ್ರಕಾರದ ಪ್ರಾಪ್ತಿಯ ಅಧಿಕಾರಿಗಳಾಗುತ್ತಾರೆ. ಕೆಲವರು, ಆಸ್ತಿಯ(ವಾರಸತ್ವ) ಅಧಿಕಾರಿಗಳು, ಕೆಲವರು ವರದಾನಗಳ ಅಧಿಕಾರಿಗಳು ಹಾಗೂ ಕೆಲವರು ಆಶೀರ್ವಾದಗಳ ಅಧಿಕಾರಿಗಳಾಗುತ್ತಾರೆ. ಇದು ಮೂರು ಪ್ರಕಾರದ ಪ್ರಾಪ್ತಿಯಿಂದ ಸಂಪನ್ನರಾಗಿ ಮಾಡುವ ಶ್ರೇಷ್ಠ ಸರೋವರವಾಗಿದೆ. ಸಾಧಾರಣ ಆತ್ಮರು ಬರುತ್ತಾರೆ ಹಾಗೂ ಫರಿಶ್ತೆಯ ಜೀವನದ ಅನುಭವ ಮಾಡಿ ಹೋಗುತ್ತಾರೆ. ಜೊತೆ ಜೊತೆಗೆ ಅನೇಕ ಬ್ರಾಹ್ಮಣ ಆತ್ಮರು ತಪಸ್ಸಿನ ಸೂಕ್ತ ಅನುಭೂತಿಗಳ ಮೂಲಕ ಅಧ್ಯಕ್ಷ ಪಾಲನೆ ಹಾಗೂ ಸೂಕ್ಷ್ಮ ಯೋಗದ ಸಹಜ ಅನುಭವ ಹಾಗೂ ಪ್ರಾಪ್ತಿಗಳ ಲಾಭವನ್ನು ಪಡೆಯುತ್ತಾರೆ. ಅನೇಕ ಬ್ರಾಹ್ಮಣ ಆತ್ಮರ ಪ್ರತಿ ಇರುವ ಶ್ರೇಷ್ಠ ಆಸೆಗಳು ಪೂರ್ತಿಯಾಗುವ ಸಾಧನಗಳು ಬಹಳ ಶ್ರೇಷ್ಠವಾಗಿವೆ. ಸ್ಥಾನವಂತು ಸಾಧಾರಣವಾಗಿದೆ ಆದರೆ ಶ್ರೇಷ್ಠ ಸ್ಥಿತಿಯನ್ನು ಅನುಭವ ಮಾಡಿಸುವಂತಹದ್ದಾಗಿದೆ. ವಿಧಿ ಪೂರ್ವಕ ಜ್ಞಾನದ ನಾಲೆಡ್ಜ್ ಅನ್ನು ವಿಶ್ವದಲ್ಲಿ ಪ್ರತ್ಯಕ್ಷ ಮಾಡುವ ಸ್ಥಾನವಾಗಿದೆ.

ಹಾಗೂ ಎಲ್ಲದಕ್ಕಿಂತ ಮೊದಲನೆಯ ಲಾಭವಂತು ತಂದೆ ಹಾಗೂ ಮಕ್ಕಳ ಮಿಲನದ್ದಾಗಿದೆ. ನೋಡಿ, ಎರಡರಷ್ಟು ಜನ ಸಂಖ್ಯೆಯಲ್ಲಿ ಮಿಲನ ಮಾಡುತ್ತಿದ್ದೀರಲ್ಲವೇ! ಬಲೇ ಹೊರಗೆ ಕುಳಿತಿದ್ದೀರಿ ಅಥವಾ ಎಲ್ಲೇ ಕುಳಿತಿದ್ದೀರಿ, ಡಬಲ್ ಸಂಖ್ಯೆಯಂತೂ ಇದೆಯಲ್ಲವೇ, ಪ್ರತ್ಯಕ್ಷ ಫಲವಾಗಿ ಮಕ್ಕಳು ಎರಡರಷ್ಟು ಸಂಖ್ಯೆಯಲ್ಲಿ ಮಿಲನವನ್ನು ಆಚರಿಸುತ್ತಿದ್ದಾರೆ. ತಿಳಿಯಿತೇ? ಹೀಗೆ ಸರೋವರದಲ್ಲ. ಸರೋವರವನ್ನು ಮಾಡುವಂತಹ, ಸಹಯೋಗ ಕೊಡುವಂತಹ ಸಂಕಲ್ಪದಿಂದ ಸಾಹಸವನ್ನು ತರಿಸುವಂತಹ ಸ್ನೇಹದ ಕೈಗಳಿಂದ ಸರೋವರವನ್ನು ಸಂಪನ್ನ ಮಾಡುವಂತಹ ದೇಶ ವಿದೇಶದ ಮಕ್ಕಳಿಗೆ ಪದಮದಷ್ಟು ಶುಭಾಶಯಗಳು, ಶುಭಾಶಯಗಳು,

ಇದು ಮೊದಲ ಇಂತಹ ಸ್ಥಾನವಾಗಿದೆ ಇದರಲ್ಲಿ ಚಿಕ್ಕ ಮಕ್ಕಳಿಂದ ಹಿಡಿದು ಯಾರೆಲ್ಲಾ ಬ್ರಾಹ್ಮಣರಿದ್ದಾರೆಯೋ ಅವರ ಸಹಯೋಗದ ತನು, ಮನ, ಧನ ಸಫಲವಾಗಿದೆ. ತನುವಿನಿಂದ ಇಟ್ಟಿಗೆಯನ್ನು ಎತ್ತಿಲ್ಲ ಆದರೆ ತನುವಿನಿಂದ ತಮ್ಮ ತಮ್ಮ ಜೊತೆಗಾರರನ್ನು ಜೊತೆಯಲ್ಲಿ ತಂದಿದ್ದಾರೆ ಉಲ್ಲಾಸವನ್ನು ತರಿಸಿದ್ದಾರೆ ಎಂದ ಮೇಲೆ ಇಂತಹ ಸ್ನೇಹ, ಸಹಯೋಗ, ಶಕ್ತಿಯ ಹನಿ ಹನಿಯಿಂದ ಶೃಂಗರಿತ ಸರೋವರ ಶ್ರೇಷ್ಠ ಸಫಲತೆಯ ಅನುಭವ ಮಾಡಿಸುತ್ತಾ ಇರುತ್ತದೆ. ಎಂದ ಮೇಲೆ ಎಲ್ಲಾ ಸಹಯೋಗಿಗಳಿಗೆ, ಮೂಲೆ ಮೂಲೆಯ ದೇಶ, ವಿದೇಶದವರಿಗೆ ಹಾಗೂ ವಿಶೇಷವಾಗಿ ತಂಪು ತಂಪಾದ ಹವಾಮಾನದಲ್ಲಿ, ಮಳೆಯಲ್ಲಿಯೂ ಸಹ ಸಾಹಸವನ್ನು ಬಿಟ್ಟಿಲ್ಲವೋ, ಅಂತಹವರಿಗೆ ವಿಶೇಷ ಶುಭಾಷಯಗಳು, ಶುಭಾಷಯಗಳು. ಬಾಪ್‌ದಾದಾರವರು ತಿಳಿದಿದ್ದಾರೆ ಮಕ್ಕಳು ಸ್ವಲ್ಪ ಕಷ್ಟವನ್ನಂತು ಪಟ್ಟಿದ್ದಾರೆ. ಪ್ರೀತಿಯಲ್ಲಿ ಪರಿಶ್ರಮದ ಅನುಭವ ಮಾಡಿಲ್ಲ ಹಾಗೂ ಎಲ್ಲಿ ಸಾಹಸವಿದೆಯೋ ಅಲ್ಲಿ ಬಾಪ್‌ದಾದಾರವರ ಪದಮದಷ್ಟು ಸಹಯೋಗವು ಸಹ ಇದೆ. ಆದ್ದರಿಂದ ಬಾಪ್‌ದಾದಾರವರು ಮಸಾಜ್ ಮಾಡುತ್ತಿದ್ದಾರೆ ಮತ್ತು ಮಾಡುತ್ತಲೇ ಇರುತ್ತಾರೆ. ಒಳ್ಳೆಯದು, ಇಲ್ಲಿನ ಇಂಜಿನಿಯರ್ಸ್ ಕೈ ಎತ್ತಿ. ಸಮಯಕ್ಕೆ ಸಂಪನ್ನ ಮಾಡಿರುವುದಕ್ಕಾಗಿ ಬಹಳ ಬಹಳ ಶುಭಾಶಯಗಳು. ನಿಮಗೆ ಕುಳಿತುಕೊಳ್ಳಲು ಯೋಗ್ಯವಾದ ಸ್ಥಾನವನ್ನಂತು ತಯಾರಿಸಿ ಕೊಟ್ಟಿದ್ದಾರೆ! ತಂದೆಯಂತು ಬಂದುಬಿಟ್ಟರಲ್ಲವೇ! ಪ್ರತಿಜ್ಞೆಯೇ ಇದಾಗಿತ್ತು. ನೀವೆಲ್ಲರೂ ಸಹ ಇವರಿಗೆ ಶುಭಾಶಯಗಳನ್ನು ಕೊಡುತ್ತಿದ್ದೀರಲ್ಲವೇ. ಹಾಲ್ ಅನ್ನು ಶೃಂಗರಿಸಿದವರು ಎಲ್ಲಿದ್ದಾರೆ? ಇವರು ಮುನ್ನಿ ಪಾರ್ಟಿಯವರಾಗಿದ್ದಾರೆ. ನೋಡಿ, ಸ್ನೇಹದ ಸರೋವರವಾಗಿದೆ ಎಂದ ಮೇಲೆ ಕಲ್ಕತ್ತಾದಿಂದ ಇಲ್ಲಿಗೆ ಹೂವು ಬಂದುಬಿಟ್ಟಿದೆ. (ಕಲ್ಕತ್ತಾದಿಂದ ಬಹಳ ಸುಂದರ ಬಣ್ಣ ಬಣ್ಣದ ಹೂಗಳು ಬಂದಿವೆ ಅದರಿಂದಲೇ ಇಡೀ ಸ್ಟೇಜ್ ಶೃಂಗರಿತವಾಗಿದೆ) ಒಳ್ಳೆಯದು! ನಿಮ್ಮೆಲ್ಲರಿಗೂ ಸಹ ಇಲ್ಲಿಗೆ ತಲುಪಿದ್ದಕ್ಕಾಗಿ ಶುಭಾಷಯಗಳು ಹಾಗೂ ಮಾತೆಯರಿಗೆ ಪದಮದಷ್ಟು ಶುಭಾಷಯಗಳು.

(ಜಾಲ್ ಮಿಸ್ತ್ರಿ, ಯಾರು ಹಾಲ್‌ನಲ್ಲಿ ಸೌಂಡ್‌ನ ಪ್ರಬಂಧ ಮಾಡಿದರು) ನೋಡಿ ಇವರ ಸಾಹಸವಿಲ್ಲದಿದ್ದರೆ ನೀವೆಲ್ಲರೂ ಮುರಳಿಯನ್ನು ಕೇಳಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಎಲ್ಲರೂ ಮುರಳಿಯ ಪ್ರೇಮಿಗಳಾಗಿದ್ದೀರಲ್ಲವೇ. ಮುರಳಿಯ ಸಾಧನ ಎಲ್ಲದಕ್ಕಿಂತ ಶ್ರೇಷ್ಠವಾದದ್ದಾಗಿದೆ. ಎಷ್ಟು ಒಳ್ಳೆಯ ಪ್ರಬಂಧ ಮಾಡಿದ್ದಾರೆ. ಆರಾಮಾಗಿ ಕೇಳಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಹೊರಗಡೆಯೂ ಸಹ ಕೇಳುತ್ತಿದೆ. ಇದಂತೂ ಬಹಳ ಒಳ್ಳೆಯ ಪ್ರಬಂಧ ಮಾಡಿದ್ದಾರೆ. ಯಾರೆಲ್ಲಾ ಸೇವೆಯ ನಿಮಿತ್ತರಾಗಿದ್ದಾರೆ ಒಂದೊಂದು ಡಿಪಾರ್ಟ್‌ಮೆಂಟ್‌ನ ಹೆಸರನ್ನು ತೆಗೆದುಕೊಳ್ಳುವುದಿಲ್ಲ ಆದರೆ ಪ್ರತಿಯೊಬ್ಬರೂ

ತಿಳಿದುಕೊಳ್ಳಿ ನನಗೆ ಸ್ನೇಹ ಹಾಗೂ ಸಹಯೋಗದ ಶುಭಾಶಯಗಳು ಸಿಕ್ಕಿವೆ ಎಂದು ಒಳ್ಳೆಯದು. ಎಲ್ಲರಿಗಿಂತ ಮೊದಲು ಶುಭಾಶಯಗಳು ಯಾರಿಗೆ ಕೊಡುವುದು? ದಾದಿಯವರಿಗೆ. (ಬಾಪ್ ದಾದಾರವರಿಗೆ) ಬಾಪ್ ದಾದಾರವರಂತೂ ಕೂಡುವವರಾಗಿದ್ದಾರಲ್ಲವೇ ಬಾಪ್‌ದಾದಾರವರು ಸದಾ ಹೇಳುತ್ತಾರೆ- ಮಕ್ಕಳ ನಂಬರ್ ವನ್ ಸರ್ವೆಂಟ್ ಎಂದರೆ ತಂದೆಯಾಗಿದ್ದಾರೆ. ತಂದೆಯಂತೂ ಸದಾ ಸೇವಾಧಾರಿಯಾಗಿದ್ದಾರೆ ಆದರೆ ಮಕ್ಕಳು ಸಹ ಸೇವೆಯಲ್ಲಿ ತಂದೆಗಿಂತ ಮುಂದೆ ಸಹಯೋಗಿ ಆಗಿದ್ದಾರೆ. ಒಬ್ಬೊಬ್ಬರ ಹೆಸರನ್ನು ತೆಗೆದುಕೊಳ್ಳಬೇಕೇ? ಆದರೆ ಹೃದಯದಲ್ಲಿ ಒಂದೊಂದು ಮಗುವಿನ ಹೆಸರನ್ನು ತೆಗೆದುಕೊಳ್ಳುತ್ತಿದ್ದಾರೆ ಹಾಗೂ ನೆನಪು ಪ್ರೀತಿಯನ್ನು ಕೊಡುತ್ತಿದ್ದಾರೆ. ಎಲ್ಲಾ ಡಿಪಾರ್ಟ್‌ಮೆಂಟ್ ನವರಿಗೂ ಶುಭಾಷಯಗಳು ಬೆಳಕು ಇಲ್ಲದಿದ್ದರೂ ಸಹ ಕೆಲಸ ನಡೆಯುವುದಿಲ್ಲ, ಮೈಕ್ ಇಲ್ಲದಿದ್ದರೂ ಸಹ ಕೆಲಸ ನಡೆಯುವುದಿಲ್ಲ. ಲೈಟ್, ಮೈಟ್, ಮೈಕ್ ಎಲ್ಲರಿಗೂ ಶುಭಾಷಯಗಳು.

(ಟೀಚರ್ಸ್ ಜೊತೆಗೆ) ನೀವು ಇಲ್ಲದಿದ್ದರೆ ಟೀಚರ್ಸ್ ಹೊರ ಬರುತ್ತಿರಲಿಲ್ಲ. ಒಬ್ಬೊಬ್ಬರು ನೋಡಿ ಎಷ್ಟೊಂದು ಟೀಚರ್ಸ್ ಗಳನ್ನು ತಯಾರಿಸಿದ್ದೀರಿ. ಇಲ್ಲಿ ಸೇವೆಯ ರಾಜಧಾನಿ ಹಾಗೂ ಅಲ್ಲಿ ರಾಜ್ಯದ ರಾಜಧಾನಿ ಇರುವುದು. ಒಳ್ಳೆಯದು. ಪಾಂಡವರು ಸಹ ನೋಡುತ್ತಿದ್ದಾರೆ ಒಳ್ಳೊಳ್ಳೆಯ ಪಾಂಡವರು ಸಹ ತಲುಪಿಬಿಟ್ಟಿದ್ದಾರೆ ಪಾಂಡವರ ಹೊರತು ಗತಿ ಇಲ್ಲ ಆದರೆ ಪಾಂಡವರು ಶಕ್ತಿಯರನ್ನು ಮುಂದಿಟ್ಟಿದ್ದಾರೆ. ನೀವು ಇಟ್ಟಿದ್ದೀರಾ ಅಥವಾ ತಂದೆ ಇಟ್ಟಿದ್ದಾರೋ? ಫಾಲೋ ಫಾದರ್ ಮಾಡಿದ್ದೀರಿ. ನೀವೆಲ್ಲರೂ ಸಹ ತಂದೆಯ ಸಮೀಪ ಕುಳಿತಿದ್ದೀರಿ. ಇವರೇ ಸಮೀಪದವರಾಗಿದ್ದಾರೆ ಎಂದು ತಿಳಿದುಕೊಳ್ಳಬೇಡಿ. ಆದರೆ ಯಾರು ಎದುರುಗಡೆ ಇದ್ದಾರೆಯೋ ಅವರು ಅತಿ ಸಮೀಪ ಇದ್ದಾರೆ.

ಡಬಲ್ ಫಾರಿನರ್ಸ್ ಸಹ ಬಂದಿದ್ದಾರೆ. ಇವರು ಸಹ ಅದ್ಭುತಗಳನ್ನು ಮಾಡುತ್ತಿದ್ದಾರೆ. ದೇಶ ವಿದೇಶದಲ್ಲಿ ಪ್ರತ್ಯಕ್ಷ ಮಾಡುವಂತಹ ಸೇವೆ ಬಹಳ ಚೆನ್ನಾಗಿ ಮಾಡುತ್ತಿದ್ದಾರೆ ಹಾಗೂ ಮುಂದೆಯೂ ಮಾಡುತ್ತಿರುತ್ತಾರೆ. ಒಳ್ಳೆಯದು!( ನಂತರ ಬಾಪ್ ದಾದಾರವರು ಜ್ಞಾನ ಸರೋವರದ ವಿಶಾಲ ಸ್ಟೇಜಿನ ಮೇಲೆ ನಿಂತು ಇಂಜಿನಿಯರ್ಸ್ ಜೊತೆ ಮೇಣದಬತ್ತಿಯನ್ನು ಅಂಟಿಸಿದರು ಹಾಗೂ ಮುಖ್ಯ ಟೀಚರ್ಸ್ ಹಾಗೂ ದಾದಿಯವರೊಂದಿಗೆ ಕೇಕ್ ಕಟ್ ಮಾಡಿದರು. ನಂತರ ಮುಖ್ಯ ದಾದಿಯವರು ಬಾಪ್‌ದಾದಾರವರೊಂದಿಗೆ ಹಾಲ್ ಮೇಲೆ ಬಂದರು, ಅಲ್ಲಿ ಬಾಪ್‌ದಾದಾರವರು ಎರಡು ಸಾವಿರಕ್ಕಿಂತ ಅಧಿಕ ಸಂಖ್ಯೆಯಲ್ಲಿ ಕುಳಿತಿರುವ ಮಾತೆಯರನ್ನು ಕೈಗಳಿಂದ ಆಶೀರ್ವದಿಸುತ್ತಾ ಭೇಟಿ ಮಾಡಿದರು ಹಾಗೂ ಧ್ವಜಾರೋಹಣ ಮಾಡಿದರು. ತದನಂತರ ಯಾವ ಮಹಾ ವಾಕ್ಯಗಳನ್ನು ಉಚ್ಚರಿಸಿದರು? ಅದು ಈ ಪ್ರಕಾರವಾಗಿದೆ):-

ಬಾಪ್‌ದಾದಾರವರು. ನೀವೆಲ್ಲಾ ಮಕ್ಕಳ ಹೃದಯದಲ್ಲಿ ತಂದೆಯ ಸ್ನೇಹದ ಬಾವುಟ ಹಾರುತ್ತಿರುವುದನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಇದು ಸೇವೆಯದಾಗಿದೆ ಹಾಗೂ ತಂದೆ ಮಕ್ಕಳ ಮಧ್ಯದಲ್ಲಿ ಹೃದಯದಲ್ಲಿ ಸ್ನೇಹದ ಬಾವುಟ ಹಾರುತಿದೆ. ಹೇಗೆ ಈ ಧ್ವಜಾರೋಹಣದ ಸೆರಿಮನಿ ಮಾಡುತ್ತೀರೆಂದರೆ ಬಾವುಟವನ್ನು ಮೇಲೆ ಹಾರಿಸುತ್ತೀರಲ್ಲವೇ, ಅದೇ ರೀತಿ ಸದಾ ಸ್ನೇಹದಲ್ಲಿ ಎತ್ತರಕ್ಕಿಂತ ಎತ್ತರದಲ್ಲಿ ಹಾರುತ್ತಾ ಇರಿ. ಈ ಬಾವುಟವು ಸಹ ತಂದೆಯನ್ನು ಪ್ರತ್ಯಕ್ಷ ಮಾಡುವಂತಹ ಬಾವುಟವಾಗಿದೆ. ಇದು ಬಟ್ಟೆಯ ಬಾವುಟವಾಗಿದೆ ಆದರೆ ಈ ಬಟ್ಟೆಯ ಬಾವುಟದಲ್ಲಿ ನಿಮ್ಮೆಲ್ಲರ ಧ್ವನಿ ಸಮಾವೇಶವಾಗಿದೆ "ತಂದೆ ಬಂದು ಬಿಟ್ಟಿದ್ದಾರೆ" ಇದೇ ಪ್ರತ್ಯಕ್ಷತೆಯ ಬಾವುಟ ಈಗ ಮೂಲೆ ಮೂಲೆಯಲ್ಲಿ ಹಾರಲಿದೆ.

ಹಾಗೂ ನೀವೆಲ್ಲರೂ ಆ ಹಾರುತ್ತಿರುವ ಪ್ರತ್ಯಕ್ಷತೆಯ ಬಾವುಟವನ್ನು ನೋಡುವಿರಿ, ಕೇಳುವಿರಿ, ಹರ್ಷಿತರಾಗುವಿರಿ. ಇಂದು ಜ್ಞಾನ ಸರೋವರದಲ್ಲಿ ಇದ್ದೀರಿ. ನಾಳೆ ವಿಶ್ವದಲ್ಲಿ ಈ ಬಾವುಟ ಹಾರಾಡುತ್ತದೆ. ನಿಮ್ಮೆಲ್ಲರಿಗೂ ತಪಸ್ಸು ಮಾಡಬೇಕಾಯಿತು ಅದರ ಶುಭಾಶಯಗಳು ಆದರೆ ಈಗ ಬಹಳ ಆರಾಮವಾಗಿ ಚೆನ್ನಾಗಿ ಕುಳಿತುಕೊಂಡಿದ್ದೀರಿ. ಎಷ್ಟು ನಿಮಗೆ ಕಾಣಿಸುತ್ತಿದೆ ಅಷ್ಟು ಒಳಗಡೆ, ಹಿಂದೆ ಕುಳಿತಿರುವವರಿಗೆ ಕಾಣಿಸುತ್ತಿಲ್ಲ. ನೀವು ಹೊರಗಡೆ ಇರಲಿಲ್ಲ ಆದರೆ ಹೃದಯದ ಒಳಗೆ ಇದ್ದೀರಿ. ಎಲ್ಲರೂ ಬಹಳ ಬಹಳ ಅದೃಷ್ಟವಂತರಾಗಿದ್ದೀರಿ ಆದ್ದರಿಂದಲೇ ಸದಾ ಖುಷಿಯನ್ನು ಹಂಚುತ್ತೀರಿ, ಖುಷಿಯಾಗಿರಿ ಹಾಗೂ ಖುಷಿಯನ್ನು ಹಂಚುತ್ತಿರಿ. (ನಂತರ ಬಾಪ್‌ದಾದಾರವರು ನಾಲ್ಕಾರು ಕಡೆ ಆಗಿರುವ ಭವನಗಳ ಮೇಲೆ ತಮ್ಮ ದೃಷ್ಟಿ ಹಾಕಿದರು. ಮತ್ತು ಪುನಃ ಹಾಲ್‌ನಲ್ಲಿ ಬಂದು ಎಲ್ಲಾ ಇಂಜಿನಿಯರಗಳಿಗೆ ತಮ್ಮ ಹಸ್ತಗಳಿಂದ ಟೋಲಿ ತಿನ್ನಿಸಿದರು)

**ಜ್ಞಾನ ಸರೋವರದ ಸೇವೆಯ ಪ್ರತಿ ಬಾಪ್‌ದಾದಾರವರ ಸೂಚನೆಗಳು.**

ಜ್ಞಾನ ಸರೋವರದ ಇಂತಹ ಕಾರ್ಯಕ್ರಮವನ್ನು ಮಾಡಿ ಯಾವುದು ವಿಶ್ವದಲ್ಲಿ ಇಂತಹ ಸೇವೆಯ ಸಮಾಚಾರ ಯಾವ ಸ್ಥಾನದಲ್ಲಿಯೂ ಆಗಿರಬಾರದು ಭಲೇ ಯು.ಎಸ್ ಆಗಿರಲಿ ಅಥವಾ ಅದಕ್ಕಿಂತ ದೊಡ್ಡ ಸ್ಥಾನವಾಗಿರಲಿ, ಅದಕ್ಕಿಂತ ದೊಡ್ಡ ಕಾರ್ಯಕ್ರಮವಾಗಲಿ, ಇದರಲ್ಲಿ ಎಬ್ಬರ ತನುವು ತೊಡಗಿದೆ, ಮನವು ತೊಡಗಿದೆ ಹಾಗೂ ಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಎಲ್ಲರ ಧನವು ಸಹ ತೊಡಗಿದೆ. ಹೇಗೆ ಎಲ್ಲರ ಸಹಯೋಗದ ಬೆರಳು ತೊಡಗಿದೆ ಎಂದ ಮೇಲೆ ಸೇವೆಯಲ್ಲಿಯೂ ಸಹ ಎಲ್ಲರ ಸಹಯೋಗದ ಬೆರಳು ತೊಡಗಲೇ ಬೇಕಾಗಿದೆ. ಪ್ಲಾನ್ (ಯೋಜನೆ) ಕೊಡುತ್ತಿರಿ ಆದರೆ ಪ್ಲಾನ್ ತಯಾರಿಸುವ ಸಮಯ, ಪ್ಲಾನ್ ಕೊಡುವ ಸಮಯ, ಮಾಲೀಕರಾಗಿ ಕೊಡಿ ಹಾಗೂ ಯಾವಾಗ ಫೈನಲ್ (ಅಂತಿಮ) ಮೆಜಾರಿಟಿ ಮಾಡುತ್ತಾರೆ ಆಗ ಬಾಲಕರಾಗಿ ಬಿಡಿ ಬಾಲಕ ಏನು ಮಾಡುತ್ತದೆ. ಹಾಜಿ (ಒಪ್ಪಿಕೊಳ್ಳುವುದು) ಹಾಗೂ ಮಾಲಿಕ ಏನು ಮಾಡುತ್ತಾರೆ! ಇಲ್ಲ ಹೀಗೆ ಮಾಡಿ ಎಂದ ಮೇಲೆ ಬಾಲಕ ಹಾಗೂ ಮಾಲೀಕ ಪ್ಲಾನ್ ಕೊಡುವುದು ಒಳ್ಳೆಯದಾಗಿದೆ ಆದರೆ ನನ್ನ ಪ್ಲಾನ್ ನಡೆಯಲೇಬೇಕು. ಈ ಯೋಚನೆ ಇಲ್ಲದಿರಲಿ ಏನಾಗುತ್ತದೆಯೋ ಅದು ಒಳ್ಳೆಯದು, ಬದಿಗೆ ಸರಿದು ಬಿಡಬೇಡಿ. ಯೋಜನೆಯನ್ನು ಕೊಡಿ ಆದರೆ ಬಾಲಕರು ಸಹ ಆಗಿರಿ, ಮಾಲೀಕರು ಸಹ ಆಗಿರಿ ಯೋಜನೆ ತಯಾರಿಸುವ ಸಮಯದಲ್ಲಿ ಮಾಲೀಕ ಹಾಗೂ ಅಂತಿಮದ ಸಮಯದಲ್ಲಿ ಬಾಲಕ, ಬಾಲಕ ಹಾಗೂ ಮಾಲೀಕರಾಗುವುದಂತೂ ಬರುತ್ತದೆ ಅಲ್ಲವೇ ಅಥವಾ ಕೇವಲ ಮಾಲೀಕರಾಗುವುದು ಬರುತ್ತದೆಯೇ? ಏಕೆಂದರೆ ಎಲ್ಲರೂ ಬುದ್ಧಿವಂತರಾಗಿ ಬಿಟ್ಟಿದ್ದೀರಿ ಅಲ್ಲವೇ? ಮಾಲೀಕರು ಬೇಗನೆ ಆಗಿಬಿಡುತ್ತೀರಿ. ಈಗ ತಿಳಿಯಿತೇ ಹೊಸ ವರ್ಷದಲ್ಲಿ ಏನು ಮಾಡಬೇಕು ಎಂದು? ಸೇವೆಯನ್ನು ಮಾಡಬೇಕು ಹಾಗೂ ಸೇವೆಯ ಮೊದಲು ಸ್ವಯಂ ಪರಿವರ್ತನೆಯನ್ನು ಮಾಡಿಕೊಳ್ಳಬೇಕು. ಎರಡು ಬೇಕಾಗಿದೆ ಅಲ್ಲವೇ?

**ಮಧುಬನ ನಿವಾಸಿ ಸಹೋದರ ಸಹೋದರಿಯರೊಂದಿಗೆ:-**

( ಬಾಪ್‌ದಾದಾ ಅವರು ಅಬುವಿನ ಭಿನ್ನ-ಭಿನ್ನ ಸ್ಥಾನಗಳಲ್ಲಿ ಉಪಸ್ಥಿತ ಸಹೋದರ ಸಹೋದರಿಯರಿಂದ ಕೈ ಎತ್ತಿಸಿದರು) ನೋಡಿ. ಪೀಸ್ ಪಾರ್ಕಿನವರು ಸಹ ಕಡಿಮೆ ಏನಿಲ್ಲ, ಲಂಡನ್ ಅಮೇರಿಕಾ ಎಲ್ಲವೂ ಮರೆತು ಹೋಗುತ್ತದೆ. ಯಾರು ಪೀಸ್ ಪಾರ್ಕ್ ಅನ್ನು ನೋಡುತ್ತಾರೆ ಅವರು ಕಾಪಿ (ಅನುಕರಣೆ) ಮಾಡಲು ಪ್ರಯತ್ನಿಸುತ್ತಾರೆ. ಎಷ್ಟೇ ಕಾಪಿ ಮಾಡಿದರೂ ಸಹ, ಆತ್ಮಿಕತೆಯ ಹೊಳಪಂತೂ ಬರಲು ಸಾಧ್ಯವಿಲ್ಲ. ಪ್ರೀತಿಯ ಹೊಳಪಂತೂ ಬರಲು ಸಾಧ್ಯವಿಲ್ಲ ಎಂದ ಮೇಲೆ ಪರಿಶ್ರಮದ ಫಲ ಸಿಗುತ್ತಿದೆ. ಪರಿಶ್ರಮವಂತೂ ಚೆನ್ನಾಗಿ ಮಾಡಿದ್ದೀರಿ. ಪ್ರೀತಿಯಿಂದ ಪರಿಶ್ರಮ ಪಟ್ಟಿದ್ದೀರಲ್ಲವೇ ಕೇವಲ ಗಿಡಗಳಿಗೆ ನೀರು ಕೊಟ್ಟಿಲ್ಲ ಆದರೆ ಪ್ರೀತಿಯ ನೀರನ್ನು ಕೊಟ್ಟಿದ್ದೀರಿ ಆದ್ದರಿಂದ ವಾಯುಮಂಡಲ ಭಿನ್ನ ಹಾಗೂ ಪ್ರಿಯವಾಗಿದೆ. ಹಾಗೂ ಜ್ಞಾನ ಸರೋವರದವರು ಸಹ ಬಹಳ ಪ್ರೀತಿಯಿಂದ ಪರಿಶ್ರಮ ಪಡುತ್ತಿದ್ದಾರೆ. ಒಳ್ಳೆಯ ಫಲಿತಾಂಶವಾಗಿದೆ. ಹಾಗೂ ನಿಶ್ಚಯಬುದ್ಧಿಯಲ್ಲಿ ಎಲ್ಲರಿಗಿಂತ ನಂಬರ್‌ವನ್  ಆಗಿದ್ದೀರಿ. ಯಾರೇ ಎಷ್ಟೇ ಅಲುಗಾಡಿಸಿದರೂ - ತಯಾರಾಗುವುದಿಲ್ಲ, ತಯಾರಾಗುವುದಿಲ್ಲ. ಅವರು ಎಷ್ಟು ತಯಾರಾಗುವುದಿಲ್ಲ ಎನ್ನುತ್ತಿದ್ದರೂ ಅಷ್ಟು ನೀವು ಆಗುವುದು, ಆಗುವುದು ಎನ್ನುತ್ತಾ ಹೋದಿರಿ. ಆದ್ದರಿಂದಲೇ ನಿಶ್ಚಯದ ವಿಜಯವಾಗುತ್ತದೆ. ತಯಾರು ಆಗಲೇಬೇಕು. ತಂದೆ ಬರಲೇಬೇಕು ಆದ್ದರಿಂದ ನಿಶ್ಚಯದ ಶುಭಾಷಯಗಳು. ಒಳ್ಳೆಯದು. ತಲಹಟಿಯವರು ಸಹ ಮೋಜಿನಲ್ಲಿ ಬಂದುಬಿಟ್ಟಿರಿ, ಮೇಳವನ್ನು ಆಚರಿಸುವ ತಯಾರಿ ಮಾಡುತ್ತಿದ್ದೀರಿ. ಒಳ್ಳೆಯದು. ಆತ್ಮಿಕ ಸೌಂದರ್ಯವಂತು ಬೇಕಲ್ಲವೇ ನವೀನತೆಯಂತೂ ಬೇಕಲ್ಲವೇ. ಓಂ ಶಾಂತಿ. ಭವನದ ಹಾಲ್ ನಲ್ಲಂತೂ ಸದಾ ಕುಳಿತುಕೊಳ್ಳುತ್ತೀರಿ, ಆದರೆ ನವೀನತೆಯೂ ಸಹ ಬೇಕಲ್ಲವೇ. ಇನ್ನಷ್ಟು ಆತ್ಮರ ಸಂಕಲ್ಪ ಪೂರ್ಣವಾಗಿ ಹೋಗುತ್ತದೆ. ದೂರುಗಳು ಕಡಿಮೆಯಾಗುತ್ತವೆ. ಎಂದ ಮೇಲೆ ತಲಹಟಿಯಲ್ಲಿ ಸರಿಯಾಗಿ ತಯಾರಿ ಆಗುತ್ತಿದೆಯಾ? ದೊಡ್ಡ ಮಾತು ಎಂದು ಎನಿಸುವುದಿಲ್ಲ ಅಲ್ಲವೇ? ಖುಷಿಯಲ್ಲಿ ಪರಿಶ್ರಮವೂ ಸಹ ಸಹಜವಾಗಿ ಬಿಡುತ್ತದೆ, ಒಳ್ಳೆಯದು. ಅಬೂ ನಿವಾಸಿಯರು ಏನು ಮಾಡುತ್ತಿರುವಿರಿ? ಸಹಯೋಗದ ಜೊತೆಯನ್ನು ಕೊಡುತ್ತಿರುವಿರಿ. ಯಾವಾಗಲೇ ಯಾವುದೇ ಕಾರ್ಯವಿರುತ್ತದೆ ಎಂದರೆ ಅಬೂ ನಿವಾಸಿಗಳು ಆ ಕಾರ್ಯವನ್ನು ಮಾಡಿಬಿಡುತ್ತಾರೆ. ಒಳ್ಳೆಯದಾಗಿದೆ. ಮ್ಯೂಸಿಯಂ ಸಹ ಒಳ್ಳೆಯ ಸೇವೆ ಮಾಡುತ್ತಿದೆ. ಮ್ಯೂಸಿಯಂನ ಮಕ್ಕಳು ಸಹ ಚೆನ್ನಾಗಿ ಪರಿಶ್ರಮ ಪಡುತ್ತಿದ್ದಾರೆ. ಮ್ಯೂಸಿಯಂ ಅಂತೂ ನಡೆಯುತ್ತಾ ಓಡಾಡುತ್ತಿರುವ ಒಂದು ಸೇವೆಯ ಸ್ಥಾನವಾಗಿದೆ. ಈ ಮ್ಯೂಸಿಯಂ ಸಹ ಎಷ್ಟೊಂದು ಸೇವಾ ಕೇಂದ್ರಗಳನ್ನು ತೆರೆಸಿದೆ. ಎಷ್ಟೊಂದು ಆತ್ಮರನ್ನು ಈ ಧರಣಿ ಪರಿವರ್ತನೆ ಮಾಡಿದೆ. ಇಲ್ಲಿಯ ಪ್ರಭಾವ ಅಲ್ಲಿ ಸ್ಥಾನಗಳಲ್ಲಿಯೂ ಸಹ ಕೆಲಸಕ್ಕೆ ಬರುತ್ತದೆ ಏಕೆಂದರೆ ಇಲ್ಲಿ ಬರುವಂತಹವರು ಮುಕ್ತರಾಗಿಬಿಡುತ್ತಾರೆ. ಬುದ್ಧಿ ಫ್ರೀ ಆಗಿರುವ ಕಾರಣ ಪ್ರಭಾವ ಚೆನ್ನಾಗಿ ಬೀರುತ್ತದೆ ನಂತರ ಅದೇ ಕೆಲಸಕ್ಕೆ ಬರುತ್ತದೆ. ಆದ್ದರಿಂದ ಮ್ಯೂಸಿಯಂನ ಸೇವೆ ಏನು ಕಡಿಮೆ ಇಲ್ಲ. ಸ್ಥಾನಗಳ ಸೇವೆ ಚೆನ್ನಾಗಿದೆ. (ಓಂ ಶಾಂತಿ ಭವನದಲ್ಲಿ) ಇಲ್ಲಿಯೂ ಯಾವ ಗುಂಪು ತಿಳಿಸಿಕೊಡುತ್ತಾರೆ. ಅದು ಸಹ ಈ ಒಳ್ಳೆಯ ಸೇವೆಯಾಗಿದೆ. ಎಲ್ಲಾ ಜಾಗದಲ್ಲಿಯೂ ಸಹಜ ಸೇವೆ ಆಗುತ್ತಾ ಹೋಗುತ್ತದೆ, ಪ್ರಭಾವ ಬೀರುತ್ತಾ ಹೋಗುತ್ತಿದೆ. ಒಳ್ಳೆಯದು. ಒಳ್ಳೆಯದು, ಮಧುಬನದವರು ಏನು ಮಾಡುವಿರಿ? ಮಧುಬನದವರು ಸದಾ ತಮ್ಮನ್ನು ಆಧಾರ ಮೂರ್ತಿ ಹಾಗೂ ಉದ್ಧಾರ ಮೂರ್ತಿ ಎಂದುಕೊಳ್ಳಿರಿ. ಸಾಕಾರ ಕರ್ಮದಲ್ಲಿ ಮಧುಬನ ನಿವಾಸಿಗಳು ಉದಾಹರಣೆ ಆಗಿದ್ದಾರೆ. ಹಾಗೂ ಆಧಾರ ಮೂರ್ತಿಯೂ ಆಗಿದ್ದಾರೆ. ಏಕೆಂದರೆ ಏನೆಲ್ಲಾ ಅತ್ಮಿಕ ಸಾಧನೆ ಬೇಕೋ ಅದೆಲ್ಲವೂ ಮಧುಬನದಿಂದಲೇ ಹೋಗುತ್ತದೆ ಆದ್ದರಿಂದ ಮಧುಬನದವರು ಹೀಗೆ ತಿಳಿದುಕೊಳ್ಳಬೇಡಿ ನಾವು ಮಧುಬನದ

ಕೋಣೆಯಲ್ಲಿದ್ದೇವೆ ಅಥವಾ ಪಾಂಡವ ಭವನದಲ್ಲಿ ಇರುತ್ತೇವೆ ಆದರೆ ಪ್ರತಿ ಕರ್ಮದಲ್ಲಿ, ಪ್ರತಿ ಸಂಕಲ್ಪದಲ್ಲಿ, ಪ್ರತಿ ಮಾತಿನಲ್ಲಿ ಆಧಾರ ಮೂರ್ತಿ ಆಗಿದ್ದೀರಿ ಪ್ರತಿಯೊಬ್ಬರು ಯಾವ ವಿಶೇಷತೆಯನ್ನು ನೋಡುತ್ತಾರೆ ಕರ್ಮದಲ್ಲಿ, ವಾಣಿಯಲ್ಲಿ, ಅದು ಪ್ರಾಕ್ಟಿಕಲ್‌ನಲ್ಲಿ ಮಧುಬನದಲ್ಲಿಯೇ ನೋಡುತ್ತಾರೆ. ಆದ್ದರಿಂದ ಸದಾ ಪ್ರತಿ ಸಮಯ ಆಧಾರ ಮೂರ್ತಿಯೂ ಆಗಿದ್ದೀರಿ ಹಾಗೂ ಉದಾಹರಣಾ ಮೂರ್ತಿಯೂ ಆಗಿದ್ದೀರಿ ಒಳ್ಳೆಯದು ಮಾಡಿದರೂ ಉದಾಹರಣೆಯಾಗುತ್ತೀರಿ ಹಾಗೂ ಮಿಕ್ಸ್ ಮಾಡಿದರೂ ಸಹ ಉದಾಹರಣೆ ಆಗುತ್ತೀರಿ.  ಎಲ್ಲರೂ ಮಧುಬನದ ಉದಾಹರಣೆಯನ್ನೇ ಕೊಡುತ್ತಾರೆ. ಆದ್ದರಿಂದ ಈ ಜವಾಬ್ದಾರಿಯ ದೊಡ್ಡ ಕಿರೀಟ ಮಧುಬನ ನಿವಾಸಿಯರ ಮೇಲೆ ಇದೆ ಒಳ್ಳೆಯದು- ಸಂಗಮ ಭವನದವರು ಸ್ವಲ್ಪ ಜನರಿದ್ದಾರೆ ಆದರೆ ಸೇವೆ ಬಹಳ ಅವಿಶ್ರಾಂತರಾಗಿ ಮಾಡುತ್ತಾರೆ. ಸಂಗಮ ನಿವಾಸಿಯವರು ಓಡಾಡುತ್ತಾ ಮಾಡುವ ಕೆಲಸವನ್ನು ಚೆನ್ನಾಗಿ ಮಾಡುತ್ತಾರೆ.

ಒಳ್ಳೆಯದು. ಹಾಸ್ಪಿಟಲ್‌ನ ಸಮಾಚಾರ ಏನಾಗಿದೆ ಹಾಸ್ಪಿಟಲ್ ಬಹಳ ಚೆನ್ನಾಗಿದೆಯೇ ಅಥವಾ ಚೆನ್ನಾಗಿದೆಯೇ? ನೋಡಿ, ಹಾಸ್ಪಿಟಲ್‌ನ ವಿಶೇಷತೆ ಏನಾಗಿದೆ' ಯೋಚಿಸುತ್ತೀರಿ ಪೇಷಂಟ್ (ರೋಗಿಗಳು) ಯಾರು ಇರಬಾರದು ಎಂದು. ಹಾಗೂ ಅನ್ಯ ಆಸ್ಪತ್ರೆಯವರು ಯೋಚಿಸುತ್ತಾರೆ ರೋಗಿಗಳು ಬರಲಿ ಎಂದು ಒಂದು ವೇಳೆ ರೋಗಿಗಳು ಬರದಿದ್ದರೆ ಉದಾಸರಾಗಿ ಬಿಡುತ್ತಾರೆ. ಪೇಷಂಟ್‌ನ್ನು ಪೇಷನ್ಸ್‌ನಲ್ಲಿ (ತಾಳ್ಮೆಯಲ್ಲಿ) ತರುತ್ತಾರೆ. ಎಂದ ಮೇಲೆ ಆಸ್ಪತ್ರೆಯಲ್ಲಿ ಕೇವಲ ರೋಗಿಗಳಲ್ಲ ಆದರೆ ತಾಳ್ಮೆಯನ್ನು ಧಾರಣೆ ಮಾಡುವ ರೋಗಿಗಳು ಸಹ ಬರುತ್ತಾರೆ, ಒಳ್ಳೆಯದು. ಎಲ್ಲರಿಗಿಂತ ಜಾಸ್ತಿ ಹಾಸ್ಪಿಟಲ್‌ನ ಲಾಭ ಬ್ರಾಹ್ಮಣರಿಗೆ ಇದೆ. ಅಂಬುಲೆನ್ಸ್ ನಲ್ಲಿ ಕುಳಿತಿರಿ ಹಾಗೂ ತಲುಪಿಬಿಟ್ಟರಿ ಒಳ್ಳೆಯ ಸಹಯೋಗವಾಗಿದೆ. ಒಂದಂತೂ ಬ್ರಾಹ್ಮಣರಿಗೆ ಸಹಯೋಗವಾಗಿದೆ ಹಾಗೂ ಎರಡನೆಯದಾಗಿ ಕೆಲವು ಜನ ಇವರು ಏನು ಮಾಡುವುದಿಲ್ಲ ಎಂದು ತಿಳಿದುಕೊಳ್ಳುತ್ತಾರೆ. ಅವರಿಗೂ ಸಹ ಗೊತ್ತಾಗುತ್ತದೆ ಇವರು ಇದನ್ನು ಮಾಡುತ್ತಾರೆ. ಬಹಳಷ್ಟು ಮಾಡುತ್ತಾರೆ. ಹಾಸ್ಪಿಟಲ್ ಸೇವೆಯನ್ನು ವೃದ್ಧಿ ಮಾಡಿದ್ದೀರಿ ಅಲ್ಲವೇ 'ಏನು ಇಲ್ಲ' ವನ್ನು "ಮಾಡುತ್ತಿದ್ದಾರೆ". ಎನ್ನುವುದರಲ್ಲಿ ಪರಿವರ್ತನೆ ಮಾಡಿಬಿಡುತ್ತೀರಿ. ಹೀಗೆ ಮಾಡಿದ್ದೀರಲ್ಲವೇ. ಒಳ್ಳೆಯದು. ಹಾಸ್ಪಿಟಲ್ ನವರು ಒಂದು ವೇಳೆ ಬಿಡುವು ಸಿಕ್ಕರೆ ಮನಸಾ ಸೇವೆ ಬಹಳ ಮಾಡಿ. ಅದರಿಂದ ಬಿಡುವು ಸಿಗುವುದಿಲ್ಲ. ಒಳ್ಳೆಯದು.

ರಿವೈಸ್ ಕೋರ್ಸ್ 18-01-1995.

***ಜ್ಞಾನ ಸರೋವರದ ಉದ್ಘಾಟನೆಯ ಶುಭ ಮುಹೂರ್ತದಂದು ಅವ್ಯಕ್ತ ಬಾಪ್‌ದಾದಾರವರ ಮಹಾವಾಕ್ಯಗಳು. (ಬೆಳಗ್ಗೆ 11:00)***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ದಯಾಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಈಗ ಸೇವಾಧಾರಿ ಭವಿಷ್ಯದಲ್ಲಿ ರಾಜ್ಯಾಧಿಕಾರಿ.

2. ನನ್ನ ದಿವ್ಯ ರಾಜ್ಯದ ಸ್ವರ್ಗ ಸ್ಥಾನ, ಸ್ವರ್ಗದ ದಿವ್ಯ ವಸ್ತ್ರ ಸದಾ ನನ್ನ ಎದುರಿಗೆ ಸ್ಪಷ್ಟವಾಗಿದೆ ಮತ್ತು ಧಾರಣೆ ಮಾಡಿದ್ದೇನೆ ಎಂಬ ಅನುಭವ ಮಾಡಿಕೊಳ್ಳುತ್ತಿದ್ದೇನೆ.

3. ನಾನು ವಾರಸತ್ವಕ್ಕೆ, ಆಶೀರ್ವಾದಗಳಿಗೆ,  ವರದಾನಗಳಿಗೆ ಅರ್ಥಾತ್ ಮೂರು ವಿಧವಾದ ಪ್ರಾಪ್ತಿಗಳಿಗೆ ಅಧಿಕಾರಿ.

4. ನಾನು ಧೈರ್ಯ(ಸಾಹಸ) ಎಂಬ ಹೆಜ್ಜೆಯಿಂದ ತಂದೆಯ ಪದಮಾಪದಂ ಸಹಾಯವನ್ನು ಪಡೆದಿದ್ದೇನೆ.

5. ನಾನು ಎಲ್ಲಿದ್ದರೂ ಸದಾ ತಂದೆಯ ಎದುರಿಗೆ ಇರುವ ಅತಿ ಸಮೀಪ ಮಗುವಾಗಿದ್ದೇನೆ.

6. ನಾನು ಸದಾ ಸ್ನೇಹದಲ್ಲಿ ಉನ್ನತೋನ್ನತವಾಗಿ ಹಾರುತ್ತಾ ಇದ್ದೇನೆ.

7. ನಾನು ಸದಾ ಖುಷಿಯಿಂದ ಇರುತ್ತಾ ಖುಷಿಯನ್ನು ಹಂಚುತ್ತಿದ್ದೇನೆ.